ಇಳುವರಿಯಲ್ಲಿ ಕೊರತೆ: ರೈತನು ಮಾಡಿಸಿರುವ ಒಟ್ಟು ವಿಮೆ.

ಪ್ರಾರಂಭಿಕ ಇಳುವರಿ : (ನಿರ್ಧರಿತ ಕ್ಷೇತ್ರದಲ್ಲಿಯ ವಾಸ್ತವಿಕ ಸರಾಸರಿ ಇಳುವರಿಯನ್ನು ಪ್ರಾರಂಭಿಕ ಇಳುವರಿಯಿಂದ ಕಳೆದರೆ ಬರುವುದೇ ಇಳುವರಿಯ ಕೊರತೆ).

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮುಂಗಾರು ೧೯೮೬-೮೭ನೇ ಹಂಗಾಮಿನಲ್ಲಿ ಬೆಳೆ ಕಟಾವು ಸಮೀಕ್ಷೆಯನ್ನು ಮಾಡಲು ಮತ್ತು ಸಂಸ್ಕರಿಸಲು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ಈಗಾಗಲೇ ಸೂಕ್ತ ಕ್ರಮವನ್ನು ತೆಗೆದುಕೊಂಡಿರುತ್ತಾರೆ. ಇದರ ವಿವರಗಳನ್ನು ಭಾರತೀಯ ಕೃಷಿ ಸಾಂಖ್ಯಿಕ ಸಂಶೋಧನಾ ಸಂಸ್ಥೆ ನವದೆಹಲಿ ಇವರಿಗೆ ಕಳುಹಿಸಬೇಕಾಗುತ್ತದೆ. ಅವರು ಈ ವಿವರಗಳನ್ನು ಸಮೀಕ್ಷಿಸಿದ ನಂತರ ಭಾರತೀಯ ಸಾಮಾನ್ಯ ವಿಮಾ ನಿಗಮ, ಬೊಂಬಾಯಿ, ಇವರಿಗೆ ನಷ್ಟ ಪರಿಹಾರವನ್ನು ನಿರ್ಧರಿಸಲು ಕಳುಹಿಸಿಕೊಡಲಾಗುತ್ತದೆ. ಭಾರತೀಯ ಸಾಮಾನ್ಯ ವಿಮಾ ನಿಗಮವು ಈ ವಿವರಗಳನ್ನು ನಷ್ಟ ಪರಿಹಾರ ಪಾವತಿ ಮಾಡಲು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಈ ರೀತಿ ವಿವರಗಳನ್ನು ಭಾರತೀಯ ವಿಮಾ ನಿಗಮವು ರಾಜ್ಯಸರ್ಕಾರಕ್ಕೆ ಕಳುಹಿಸುವವರೆವಿಗೂ ರಾಜ್ಯ ಸರ್ಕಾರವು ನಷ್ಟ ಪರಿಹಾರವನ್ನು ಪಾವತಿ ಮಾಡಲು ಸಾಧ್ಯವಾಗುವುದಿಲ್ಲ. ಆದಾಗ್ಯೂ ನಷ್ಟ ಪರಿಹಾರವನ್ನು ಶೀಘ್ರವಾಗಿ ಪಾವತಿ ಮಾಡಲು ರಾಜ್ಯ ಸರ್ಕಾರವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

೧೯೮೫ರ ಮುಂಗಾರಿನಲ್ಲಿ ರೈತರಿಗೆ ಒಟ್ಟು ೩.೦೩ ಕೋಟಿ ರೂ.ಗಳನ್ನು ನಷ್ಟ ಪರಿಹಾರ ಧನವನ್ನು ಅವರ ಬೆಳೆ ನಷ್ಟಕ್ಕೆ ಪರಿಹಾರವಾಗಿ ಸಂದಾಯ ಮಾಡಲಾಗಿದೆ. ಬೆಳೆವಾರು ನಷ್ಟ ಪರಿಹಾರ ನೀಡಿದ ಹಣದ ವಿವರ ಈ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ಬೆಳೆ	ನೀಡಿದ ನಷ್ಟ ಪರಿಹಾರ ಹಣ (ರೂ. ಲಕ್ಷಗಳಲ್ಲಿ)
೧	ಭತ್ತ	೧೩೪.೦೫
೨	ಶೇಂಗಾ	೧೫೦.೫೫
೩	ಜೋಳಾ	೨೨.೮೨
೪	ರಾಗಿ	೧೬.೩೪
	ಒಟ್ಟು	೩೦೩.೫೬

೧೯೮೫-೮೬ ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ರೈತರಿಗೆ ಕೊಡಬೇಕಾದ ನಷ್ಟ ಪರಿಹಾರ ಹಣದ ವಿವರಗಳನ್ನು ಭಾರತೀಯ ಸಾಮಾನ್ಯ ವಿಮಾ ನಿಗಮ ಬೊಂಬಾಯಿಂದ ನಿರೀಕ್ಷಿಸಲಾಗಿದೆ.

೬) ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ಕೆಲಸ ಮಾಡುವ ನೌಕರರಿಗೆ ನಿವೃತ್ತಿ ವೇತನ ಕೊಡುವ ಬಗ್ಗೆ

ಶ್ರೀ ವೇದಾಂತ ಪೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಧಾರವಾಡ ವಿಶ್ವ ವಿದ್ಯಾನಿಲಯ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ಕೆಲಸ ಮಾಡುವ ನೌಕರರಿಗೆ ವಿಶ್ರಾಂತಿ ವೇತನವನ್ನು ಜಾರಿಗೆ ಕೊಡಲಾಗಿದೆ. ೧೯೭೬ರಲ್ಲಿ ಕಾಮನ್ ಯೂನಿವರ್ಸಿಟಿ ಬಿಲ್ ಜಾರಿಗೆ ಬಂದ ನಂತರ ಈ ವಿಶ್ವವಿದ್ಯಾನಿಲಯದ ನೌಕರರಿಗೆ ಪೆನ್‌ಷನ್ ಸೌಲಭ್ಯ ಸಿಕ್ಕಿದೆ. ಈ ನಿವೃತ್ತಿ ವೇತನ ಕೊಡುವಾಗ ಕೆ.ಸಿ.ಎಸ್.ಆರ್. ನಿಯಮಾವಳಿಯನ್ನು ಅನುಸರಿಸಲಾಗಿದೆ, ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಎಸ್.ಡಬ್ಲ್ಯುಯು.ಎಲ್.೧೬ ಎಲ್.ಪಿ.ಎಫ್.೮೨(೧೧) ಬೆಂಗಳೂರು ದಿನಾಂಕ ೫-೮-೮೨ ರಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯದ ಮುದ್ರಣಾಲಯದ ನೌಕರರಿಗೆ ಕರಾರು ಕಾಯಿದೆಯಿಂದ ವಿನಾಯಿತಿ ನೀಡಿದೆ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನೌಕರರು ಸಹ ಇದೇ ಆಧಾರದ ಮೇಲೆ ತಮಗೆ ನಿವೃತ್ತಿವೇತನ ಸೌಲಭ್ಯಗಳ ಯೋಜನೆಗಳು ಅನ್ವಯಿಸುವಂತೆ ಒತ್ತಾಯಿಸಿ

ದ್ದಾರೆ. ೪-೧೦-೮೬ ರಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯು ಮುದ್ರಣಾಲಯದ ನೌಕರರಿಗೆ ನಿವೃತ್ತಿ ವೇತನದ ಯೋಜನೆಯ ಸೌಲಭ್ಯಗಳನ್ನು ನೀಡಲು ತತ್ತ್ವಶಃ ಅಂಗೀಕಾರ ನೀಡಿದೆ. ಹಾಗೂ ಸರ್ಕಾರಕ್ಕೆ ಶಿಫಾರಸ್ ಮಾಡಿದೆ. ಆದ್ದರಿಂದ ಸರ್ಕಾರವು ಕೂಡಲೇ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನೌಕರರಿಗೆ ನಿವೃತ್ತಿವೇತನ ಸೌಲಭ್ಯಗಳನ್ನು ಕೊಡಲು ಆನುಮತಿ ನೀಡಬೇಕೆಂದು ಸಂಬಂಧಪಟ್ಟ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ವಿದ್ಯಾಸಚಿವರು),—ಸನ್ಮಾನ್ಯ ಅಧ್ಯಕ್ಷರೇ, ಈ ಮುದ್ರಣಾಲಯವು ಒಂದು ಇಂಡಸ್ಟ್ರಿಯಲ್ ಎಂಬ ವಾದ ಇದೆ. ಈಗ ಅಲ್ಲಿ ಟ್ರೇಡ್ ಯೂನಿಯನ್ ಚಟುವಟಿಕೆಗಳು ನಡೆಯುತ್ತಿವೆ. ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರ ಸರ್ಕಾರದ ಮುಂದಿದೆ. ಅದನ್ನು ಪರಿಶೀಲನೆ ಮಾಡಿ ನಾನು ತೀರ್ಮಾನ ಕೈಗೊಳ್ಳುತ್ತೇನೆ.

೭) ಮಲ್ನಾಡ್ ಪ್ರದೇಶದಲ್ಲಿ ಮಳೆಯಾಗದೇ ಬೆಳೆಗಳಿಗೆ ಹಾನಿಯಾಗಿರುವುದು

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೬-೮೭ನೇ ಸಾಲಿನಲ್ಲಿ ಮಲೆನಾಡು ಭಾಗಗಳಾದ ಸಾಗರ, ಹೊಸನಗರ, ಸೊರಬ, ಸಿರ್ಸಿ, ಸಿದ್ದಾಪುರ ಮೊದಲಾದ ಭಾಗಗಳಲ್ಲಿ ಆಗಸ್ಟ್ ನಂತರ ಮಳೆಯಾಗದೆ ಭತ್ತ ಮತ್ತು ಇತರೇ ಬೆಳೆಗಳು ಸುಮಾರು ೭೫ ಪರ್ಸೆಂಟ್ ನಾಶವಾಗಿದ್ದು, ಈ ವಿಷಯವನ್ನು ಸರ್ಕಾರಕ್ಕೆ ತಿಳಿಸಿದ್ದು, ಸರ್ಕಾರದವರೂ ಸಹಾ ತನಿಖೆ ನಡೆಸಿ ಇದನ್ನು ಒಪ್ಪಿಕೊಂಡಿರುತ್ತಾರೆ. ಆದರೆ, ಸರ್ಕಾರದವರು ಈ ಭಾಗಗಳನ್ನು ಕೇವಲ ಯಾವುದೋ ಕಾಲದ ಆಂಕಿ ಅಂಶಗಳನ್ನು ಆದರಿಸಿ ಕ್ಷಾಮ ಪೀಡಿತ ಪ್ರದೇಶಗಳೆಂದು ಘೋಷಿಸಲು ಹಿಂದೇಟು ಹಾಕಿರುತ್ತಾರೆ. ಆದರೆ ಇದರಿಂದ ರೈತರ ಕಷ್ಟ ಪರಿಹಾರವಾಗುವುದಿಲ್ಲ. ಕೊನೆಯಪಕ್ಷ ಸರ್ಕಾರದವರು ಈ ಭಾಗದ ರೈತರಿಗೆ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡು ಸಣ್ಣಕ್ಕೊಳಗಾದ ರೈತರಿಗೆ ಮತ್ತು ಕಾರ್ಮಿಕರಿಗೆ ಕೆಲಸಕೊಟ್ಟು ಆತ್ಯಂತ ಸಣ್ಣಕ್ಕೊಳಗಾದ ರೈತರಿಗೆ ಕ್ಷಾಮ ಕಾಲದಲ್ಲಿ ದೊರೆಯುವ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿ ಸಂಬಂಧಪಟ್ಟ ರೆವಿನ್ಯೂ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ೧೯೮೬-೮೭ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ ಮತ್ತು ಹೊಸನಗರ ತಾಲ್ಲೂಕುಗಳು ೫೫, ೮೭ ಮತ್ತು ೨೦ ಹಳ್ಳಿಗಳನ್ನು ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಮತ್ತು ಸಿದ್ದಾಪುರ ತಾಲೂಕುಗಳು ೩೭ ಮತ್ತು ೧೬ ಹಳ್ಳಿಗಳನ್ನು ಬರಗಾಲ ಪೀಡಿತ ಹಳ್ಳಿಗಳೆಂದು ಗುರುತಿಸಲಾಗಿದೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮಳೆ ಬೆಳೆ ಹಾಗೂ ಇತರ ಪರಿಸ್ಥಿತಿಗಳನ್ನು ಅನುಸರಿಸಿ ಯಾವುದೇ ತೊಂದರೆಗೀಡಾದ ಈ ಪ್ರದೇಶಗಳನ್ನು ಬರಪೀಡಿತವಾಗಿದೆ ಎಂದು ಗುರುತಿಸಿದ್ದಾರೆ. ಇಂತಹ ಪ್ರದೇಶಗಳಲ್ಲಿ ತೊಂದರೆಗೊಳಗಾದ ಕೃಷಿ ಕಾರ್ಮಿಕರಿಗೆ, ರೈತರಿಗೆ ಮುಂತಾದವರಿಗೆ ಉದ್ಯೋಗ ನೀಡಿಕೆ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ. ಒಟ್ಟು ಬರಪರಿಹಾರ ಮತ್ತು ಯೋಜನೆ ಆಡಿಯಲ್ಲಿ ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಕ್ರಮವಾಗಿ ೫೬.೫೧ ಮತ್ತು ೨೬.೭೬ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದಕ್ಕಾಗಿ, ಪ್ರಸಕ್ತ ಸಾಲಿನಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗೆ ಸರ್ಕಾರವು ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಿದೆ.

ಜಿಲ್ಲೆಗಳು	ಎನ್‌ಆರ್‌ಇಪಿ	ಆರ್‌ಎಲ್‌ಇಜಿಪಿ	ಹೊಸ ಕಾಮಗಾರಿ	ಕೃಷಿ ಮಿನಿಕಿಟ್	ಕುಡಿಯುವ ನೀರಿನ ಯೋಜನೆ ಮತ್ತು ಮೇವಿನ ಪೈರಿಕೆಗಾಗಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ
	ಬಿಡುಗಡೆ	ಬಿಡುಗಡೆ	ಬಿಡುಗಡೆ	ಬಿಡುಗಡೆ	ಬಿಡುಗಡೆ
೧. ಉತ್ತರ ಕನ್ನಡ	೫೬.೦೨	೩೭-೦೩	೩.೦೦	೧೦.೦೦	೧೧.೦೦
೨. ಶಿವಮೊಗ್ಗ	೮೩.೯೬	೮೦.೫೪	೪ ೦೦	೫.೦೦	೧೪ ೦೦